ಅ) ಹಾಗಿದ್ದಲ್ಲಿ ಈ ರೀತಿ ನೀರು ಕಲುಷಿತವಾಗುವುದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಿಗೆ ಮಲಪ್ರಭಾ ಜಲಾಶಯದಿಂದ ನೀರು ಪೂರೈಕೆ ಆಗುತ್ತಿದ್ದು ಹಾಲಿ ಮಲಪ್ರಭಾ ಜಲಾಶಯದ ನೀರಿನ ಗುಣಮಟ್ಟ ಕೊಳಚೆ ನೀರಿನಿಂದ ಕಲುಷಿತಗೊಂಡು ಮಲೀನವಾಗಿರುವುದಿಲ್ಲ. ನೀರಿನ ಗುಣಮಟ್ಟ ತೃಪ್ತಿಕರವಾಗಿದೆ ಎಂದು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿರುತ್ತದೆ.

ಆ) ಸವದತ್ತಿ ಪಟ್ಟಣದಿಂದ ಬರುವ ಒಳಚರಂಡಿ ಹಾಗೂ ಕೊಳಚೆ ನೀರನ್ನು ಜಲಾಶಯದ ಹತ್ತಿರ ಇರುವ ಒಂದು ದೊಡ್ಡ ಹೊಂಡದಲ್ಲಿ ಬಿಡಲಾಗಿದೆ. ಈ ಹೊಂಡವು ಜಲಾಶಯದ ಮೇಲ್ಮಟ್ಟದಲ್ಲಿ ಇದ್ದು ಜಲಾಶಯಕ್ಕೆ ಹರಿದು ಬರುವ ಸಾಧ್ಯತೆಗಳು ಇರುತ್ತದೆ. ಇದನ್ನು ತಡೆಗಟ್ಟಲು ಸವದತ್ತಿ ಪಟ್ಟಣಕ್ಕೆ ಸುಸಜ್ಜಿತ ಒಳಚರಂಡಿ ಯೋಜನೆಯನ್ನು ರೂಪಿಸಲು ಸರ್ಕಾರ ಕ್ರಮಕೈಗೊಂಡಿದ್ದು ಇದಕ್ಕೆ ವಿವರವಾದ ಅಂದಾಜನ್ನು ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯು ತಯಾರಿಸಿದ್ದು, ಈ ಅಂದಾಜಿಗೆ ಅನುಮೋದನೆ ಕೊಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಎಂ.ಆರ್.ಪಿ.ಎಲ್.ನಿಂದ ತೈಲ ಮಿಶ್ರಿತ ನೀರು ಹರಿದು ಭೂಮಿ ಬೆಳೆ ನಾಶ

2962 - ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಸುರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿರುವ ಎಂ.ಆರ್.ಪಿ.ಎಲ್. ನಿಂದ ತೈಲ ಮಿಶ್ರಿತ ನೀರು ಹರಿದು ಎಷ್ಟು ಎಕರೆ ಭೂಮಿಯಲ್ಲಿ ಬೆಳೆ ನಾಶವಾಗಿರುತ್ತದೆ?

ಆ) ಈ ಸಂಬಂಧವಾಗಿ ಕಂಪನಿಯಿಂದ ಪರಿಹಾರಕ್ಕಾಗಿ ಬಿಡುಗಡೆಗೊಂಡ ಮೊತ್ತ ಎಷ್ಟು?

ಇ) ವಿತರಣೆಯಲ್ಲಿ ಅನ್ಯಾಯವಾಗಿದೆ ಎಂಬ ಕೃಷಿಕರ ದೂರು ಸರ್ಕಾರಕ್ಕೆ ತಿಳಿದಿದೆಯೇ, ತಿಳಿದಿದ್ದರೆ, ಸರ್ಕಾರದ ಕಡೆಯಿಂದ ಕೈಗೊಳ್ಳಲಾದ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು) :

ಅ) ಕುತ್ತೆತ್ತೂರು ಗ್ರಾಮದ 91-51 ಎಕರೆ ಮತ್ತು ಸೂರಿಂಜೆ ಗ್ರಾಮದ 34-06 ಎಕರೆ.

ಆ) ಒಟ್ಟು 76 ಭೂ ಮಾಲೀಕರಿಗೆ ರೂ. 4,99,000 ಗಳ ನಗರ ಪರಿಹಾರವನ್ನು ಎಂ.ಆರ್.ಪಿ.ಎಲ್. ನವರು ಬಿಡುಗಡೆ ಮಾಡಿದ್ದಾರೆ.

ಇ) ಇಲ್ಲ.